ಗೊತ್ತಿರಬೇಕೆಂದು ಕಾಣುತ್ತದೆ. ನಿಮ್ಮ ಗಮನಕ್ಕೇ ಬಂದಿರಲಿಲ್ಲ, ಈ ಕಲ್ಲು ಏನು ಎನ್ನುವುದು ಈ ಪ್ರಪಂಚದಲ್ಲಿ ನಿಮ್ಮ ಗಮನಕ್ಕೆ ಬಂದಿರಲಿಲ್ಲ. ಈ ರಾಜ್ಯದಲ್ಲಿ ಗ್ರಾನೈಟ್ ಲೂಟಿ ಬಗ್ಗೆ 10 ವರ್ಷದಿಂದ ರಾಜ್ಯದ ಜನತೆ ಗಮನಕ್ಕೆ ತಂದವನು ನಾನು. ಯಳಂದೂರಿನಲ್ಲಿ 2-3 ತಹಶೀಲ್ದಾರರನ್ನು ಅಮಾನತ್ತಿನಲ್ಲಿ ಇಟ್ಟಿದ್ದೀರಿ. ತಹಸೀಲ್ದಾರ್ ಒಬ್ಬರೇ ನಡೆಸುತ್ತಿದ್ದರೇ ? ಜಿಲ್ಲಾ ಮಟ್ಟದ ಅಧಿಕಾರಿಗಳು ಯಾರೂ ಗಮನ ಹರಿಸಿಲ್ಲವೇ ? ಅವರನ್ನು ಏಕೆ ಅಮಾನತ್ತಿನಲ್ಲಿ ಇಡಲಿಲ್ಲ ? ಪೋಲೀಸ್ ಇಲಾಖೆಯವರನ್ನು ಏಕೆ ಬಿಟ್ಟಿರಿ ? ಕಂದಾಯ ಇಲಾಖೆಯ ಮುಖ್ಯ ಅಧಿಕಾರಿಗಳನ್ನು ಏಕೆ ಬಿಟ್ಟಿರಿ ? ಇವರು ಬರೀ ಅಬ್ಬೇಪಾರಿಗಳು ಸಿಕ್ಕಿ ಹಾಕಿಕೊಂಡು ಬಿಟ್ಟರು. ಕೆಲವರು ತಹಶೀಲ್ದಾರರುಗಳನ್ನು ಅಮಾನತ್ತಿಲ್ಲಿ ಇಟ್ಟಿರಿ. ಜಿಲ್ಲಾಧಿಕಾರಿಗಳನ್ನು ಅಮಾನತ್ತಿನಲ್ಲಿ ಇಟ್ಟಿದ್ದೀರಾ ? ಪೋಲೀಸ್ ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಟ್ಟಿರಾ ? ಅದನ್ನು ಬಿಟ್ಟು ನಿಮ್ಮ ಗಣಿ ಇಲಾಖೆಯ ಮಂತ್ರಿಗಳು ಹೋಗಿ ಅವರಿಗೆ ಏನೋ ಸರ್ಟಿಫಿಕೇಟನ್ನು, ಒಳ್ಳೆಯವರು, ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳುತ್ತಿದ್ದಾರೆ. ನಾನು ತೋರಿಸುತ್ತೇನೆ. ಇದನ್ನೆಲ್ಲಾ ತಡೆಹಿಡಿಯುವ ಶಕ್ತಿ ಯಾರಿಗೆ ಇದೆ ? ಜಿಲ್ಲಾಧಿಕಾರಿಗಳಿಗೆ, ಪೋಲೀಸ್ ಅಧಿಕಾರಿಗಳಿಗೆ, ಅವರನ್ನು ಬಿಟ್ಟು ಯಾರೋ ಸಹಾಯಕ ತಹಶೀಲ್ದಾರರಿಗೆ ಹಿಡಿದಿದ್ದೀರೆಂದರೆ ಇದು ನಿಮ್ಮ ದಕ್ಷತೆಯ ಪ್ರತೀಕವೇ ಎಂದು ನನಗೆ ಸ್ವಲ್ಪ ಅನುಮಾನ ಬರುತ್ತಾ ಇದೆ.

4.45 ಪಿ. ಎಂ.

ನಿಮ್ಮ ಬಗ್ಗೆ ನನಗೆ ಗೌರವವಿದೆ. ಹೆಚ್ಚಿನ ದಕ್ಷತೆ ಇರತಕ್ಕವರು ಅಂತ ಇದೆ. ಇದನ್ನು ಬಿಟ್ಟು, ಯಳಂದೂರಿನಲ್ಲಿ ಇಬ್ಬರನ್ನು ಅಮಾನತ್ತಿನಲ್ಲಿಟ್ಟರೆ ಇದು ನಡೆಯುತ್ತದೆಯೇ ? ದಯಮಾಡಿ ತಾವು ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ:- ಎನ್‌ಕ್ವೈರಿ ಮಾಡಿ ಅದರ ರಿಪೋರ್ಟ್ ಬಂದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಯಾವ ಅಧಿಕಾರಿಯನ್ನು ಸ್ಪೇರ್ ಮಾಡತಕ್ಕ ಮನುಷ್ಯ ನಾನಲ್ಲ. ತಮ್ಮಲ್ಲಿ ಏನಾದರೂ ಮಾಹಿತಿ ಇದ್ದರೆ ಕೊಡಿ. ಅದಷ್ಟು ಜಾಗ್ರತೆ ಅದನ್ನು ತಡೆಗಟ್ಟುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಗಣಿ ವ್ಯವಹಾರದಲ್ಲಿ ಅವ್ಯವಹಾರ ನಡೆದಿದೆಯೆಂದು ಗೊತ್ತಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ನೀವು ಅನೇಕ ಸಾರಿ ಈ ಮನೆಯಲ್ಲಿ ಈ ಗಣಿ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಆದರೆ ಅಧಿಕಾರಿಗಳು ಅಪರ ಜೊತೆಯಲ್ಲಿ ಶಾಮೀಲಾಗಿ ಈ ಕೆಲಸ ಮಾಡುತ್ತಾರೆಂದರೆ ಸರ್ಕಾರ ಅದನ್ನು ಹಿಡಿಯಬೇಕೆಂದರೆ ಕಷ್ಟವಾಗುತ್ತದೆ. ಯಾವ ಅಧಿಕಾರಿಯನ್ನು ಉಪಯೋಗಿಸಿಕೊಂಡು ಈ ಕೆಟ್ಟ ಕೆಲಸವನ್ನು ತಡೆಹಿಡಿಯಬೇಕಾಗಿದೆ ಆ ಅಧಿಕಾರಿಯೇ ಆ ಕೆಟ್ಟ ಕೆಲಸಕ್ಕೆ ಪ್ರಚೋದನೆ ಮಾಡಿದರೆ ಯಾವ ರೀತಿ ಕೆಲಸ ಮಾಡಬೇಕು. ಸರ್ಕಾರ ಎನ್ನುವುದನ್ನು ನೀವೇ ಯೋಚನೆ ಮಾಡಿ. ನಮಗೆ ಬೇರೆ ಕಡೆಯಿಂದ ಇನ್‌ಫರ್ಮೇಷನ್ ಬರಬೇಕು. ಆ ಇನ್‌ಫರ್ಮೇಷನ್ ಮೇಲೆ ಹಿಡಿಯಬೇಕು. ಹಿಡಿದು ಅಧಿಕಾರಿಗಳನ್ನು ನಾವು ಸಸ್ಪೆಂಡ್ ಮಾಡಬೇಕು. ಆ ಕೆಲಸ ಮಾಡುವುದಕ್ಕೆ ಈಗ ಶುರು ಮಾಡಿದ್ದೇವೆ.

ಯಲ್ಬುರ್ಗ ತಾಲ್ಲೂಕು ಭೂನ್ಯಾಯ ಮಂಡಳಿಯಿಂದ ಭೂಮಿಯ ಹಂಚಿಕೆ.

138 (705):- ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ: ರಾಯಚೂರು ಜಿಲ್ಲೆ ಯಲ್ಬುರ್ಗ ತಾಲ್ಲೂಕು ಕಕ್ಕಿಹಳ್ಳಿ ಗ್ರಾಮದಲ್ಲಿರುವ ಒಟ್ಟು ಸರ್ವೆ ನಂಬರುಗಳ ಸಂಖ್ಯೆ ಎಷ್ಟು ? ಹಾಗೂ ವಿಸ್ತೀರ್ಣ ಎಷ್ಟು (ಇವುಗಳ ಭೂಮಾಲೀಕರ ಹೆಸರು ಸರ್ವೆ ನಂಬರ್ ಹಾಗೂ ವಿಸ್ತೀರ್ಣ ತಿಳಿಸುವುದು),

ಅ. ಈ ಜಮೀನುಗಳಲ್ಲಿ ಯಾವ ಯಾವ ಸರ್ವೆ ನಂಬರನ್ನು ಯಲ್ಬುರ್ಗ ತಾಲ್ಲೂಕು ಭೂ ನ್ಯಾಯ ಮಂಡಳಿ ಪತಿಯಿಂದ ಗೇಣಿದಾರರಿಗೆ ನೀಡಲಾಗಿದೆ. (ಗೇಣಿದಾರರ ಹೆಸರು ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹಾಗೂ ಭೂನ್ಯಾಯ ಮಂಡಳಿ ಆಜ್ಞಾ ಫಂಯ್ಕೆ ದಿನಾಂಕ ತಿಳಿಸುವುದು.)

ಇ. ಗೇಣಿದಾರರಿಗೆ ಯಾವ ಕರಾರಿನ ಮೇಲೆ ಈ ಜಮೀನುಗಳನ್ನು ಭೂನ್ಯಾಯ ಮಂಡಳಿ ನೀಡಿದೆ ಹಾಗೂ ಯಾವ ಉದ್ದೇಶಕ್ಕೆ ನೀಡಲಾಗಿದೆ;

ಈ. ಭೂನ್ಯಾಯ ಮಂಡಳಿಯವರು ವಿಧಿಸಿದ ಕರಾರು ಹಾಗೂ ಉದ್ದೇಶಗಳನ್ನು ಉಲ್ಲಂಘಿಸಿದ್ದಲ್ಲಿ ಗೇಣಿದಾರರ ಮೇಲೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಉ. ಈಗಿರುವ ಹಾಲಿ ಸರ್ವೆ ನಂಬರ್‌ಗಳನ್ನು ಯಾವ ವರ್ಷದಿಂದ ಜಾರಿಗೆ ಬರುವಂತೆ ಸಗದಿಗೊಳಿಸಲಾಗಿದೆ;

ಊ. ಗೇಣಿದಾರರು ಭೂನ್ಯಾಯ ಮಂಡಳಿಗೆ ಅರ್ಜಿ ಹಾಕಲು ಕಾಲಮಾನ ಯಾವ ದಿನದಿಂದ ಪ್ರಾರಂಭವಾಗಿ ಯಾವ ದಿನ ಕೊನೆಗೊಂಡಿದೆ;

ಋ. ಭೂನ್ಯಾಯ ಮಂಡಳಿ ಆಜ್ಞೆಯಂತೆ ಯಾವ ಯಾವ ಗೇಣಿದಾರರು (ಫಾರಂ 10 ರಂತೆ) ತಮ್ಮ ಹೆಸರಿಗೆ ಜಮೀನು ಪಟ್ಟಿ ಮಾಡಿಕೊಂಡಿದ್ದಾರೆ (ಗೇಣಿದಾರರ ಹೆಸರು ಸರ್ವೆ ನಂ. ವಿಸ್ತೀರ್ಣ ತಿಳಿಸುವುದು) ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಯಲ್ಬುರ್ಗ ತಾಲ್ಲೂಕಿನ ಕಕ್ಕಿಹಳ್ಳಿ ಗ್ರಾಮದಲ್ಲಿರುವ ಒಟ್ಟು ಸರ್ವೆ ನಂಬರ್‌ಗಳು 99 ಹಾಗೂ ಇವುಗಳ ವಿಸ್ತೀರ್ಣ 1229.31 ಎಕರೆ ಇರುತ್ತದೆ (ಇವುಗಳ ಭೂಮಾಲೀಕರ ಹೆಸರು ಸರ್ವೆ ನಂಬರ್ ಹಾಗೂ ವಿಸ್ತೀರ್ಣ ತಃಖ್ತೆಯನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ).

ಆ. ಯಲ್ಬುರ್ಗ ತಾಲ್ಲೂಕು ಭೂನ್ಯಾಯ ಮಂಡಳಿಯಿಂದ ಗೇಣಿದಾರರಿಗೆ ನೀಡಲಾದ ಕಕ್ಕಿಹಳ್ಳಿ ಗ್ರಾಮದ ಸರ್ವೆ ನಂಬರ್‌ಗಳು ವಿಸ್ತೀರ್ಣ ಹಾಗೂ ಭೂನ್ಯಾಯ ಮಂಡಳಿ ಆದೇಶ ಸಂಖ್ಯೆಗಳು, ದಿನಾಂಕ ವಿವರಗಳನ್ನು ಅನುಬಂಧ–2ರಲ್ಲಿ ತಯಾರಿಸಿ ಲಗತ್ತಿಸಿದೆ.

ಇ. ಭೂನ್ಯಾಯ ಮಂಡಳಿಯಿಂದ ಗೇಣಿದಾರರಿಗೆ ಈ ಜಮೀನುಗಳನ್ನು ಕೃಷಿ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ. ಈ ಜಮೀನುಗಳನ್ನು 15 ವರ್ಷಗಳವರೆಗೆ ಪರಭಾರೆ ಮಾಡಬಾರದು. ಭೂಸುಧಾರಣೆ ಕಾಯ್ದೆ ಕಲಂ 45 ರಲ್ಲಿಯ ಅಂಶಗಳ ಮೇಲೆ ಭೂನ್ಯಾಯ ಮಂಡಳಿ ರೈತರಿಗೆ ಗೇಣಿ ಮಂಜೂರಿ ಮಾಡುತ್ತದೆ.

ಈ. ಭೂನ್ಯಾಯ ಮಂಡಳಿಯು ಕರಾರುಗಳನ್ನು ಉಲ್ಲಂಘಿಸಿವ ಪ್ರಕರಣಗಳಲ್ಲಿ ಅಂತಹ ಜಮೀನುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಜಮೀನುಗಳ ವಿವರಗಳ ತಃಖ್ತೆಯಲ್ಲಿ ತಿಳಿಸಿದೆ.

ಉ. ಈಗ ಸದ್ಯ ಜಾಲ್ತಿಯಲ್ಲಿರುವ ಕಕ್ಕಿಹಳ್ಳಿ ಸರ್ವೆ ನಂಬರ್‌ಗಳು ಮೈಸೂರು ಡಿವಿಜನ್ ಸೆಟ್ಲ್‌ಮೆಂಟ್ ಆಫೀಸರ್ ಬಂದ ದಾಖಲೆ ಪ್ರಕಾರ 1966 ರಿಂದ ಜಾರಿಯಲ್ಲಿರುತ್ತದೆ.

ಊ. ಗೇಣಿದಾರರು ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಅವಧಿ ದಿನಾಂಕ: 1.6.74 ರಿಂದ 9.6.79ರವರೆಗೆ ಇರುತ್ತದೆ.

ಭೂಸ್ವಾಧೀನ ಮಂಡಳಿಯಿಂದ ಗೇಣಿ ಮಂಜೂರಾತಿ ಬಲ್ಲಾ ರೈತರು ಪಟ್ಟಾ ಮಾಡಿಕೊಂಡಿದ್ದಾರೆ ಗೇಣಿದಾರರ ಹೆಸರು ಸರ್ವೆ ನಂಬರ್, ವಿಸ್ತೀರ್ಣ ತೋರಿಸುವ ತಖ್ತೆ ಲಗತ್ತಿಸಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ಯಲ್ಬುರ್ಗ ತಾಲ್ಲೂಕಿನ ಕಕ್ಕಿಹಳ್ಳಿ ಗ್ರಾಮದಲ್ಲಿ ಭೂಸ್ವಾಯ ಮಂಡಳಿ ವತಿಯಿಂದ ಜಮೀನು ಸೀಜಿದ್ದಾರೆ. ಈ ಜಮೀನಿನಲ್ಲಿ ಗ್ರಾನೈಟ್ ಇದೆ. ಎಲ್ಲಾ ಜಮೀನಿನಲ್ಲಿದೆ. ಅಲ್ಲಿ ಹಿಂದೆ ಇದ್ದಂತಹ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ವಿಲೇಜ್ ಅಕೌಂಟೆಂಟ್‌ಗಳು ಬಹಳಷ್ಟು ರೆಕಾರ್ಡ್‌ಗಳನ್ನು ತಮ್ಮ ಮನಸ್ಸಿಗೆ ಬಂದ ಹಾಗೆ ಭೂಸ್ವಾಯ ಮಂಡಳಿಯ ಆಜ್ಞೆಯನ್ನು ತಿರುಚಿ ಆಜ್ಞೆ ಮಾಡಿಬಿಟ್ಟಿದ್ದಾರೆ. ಇದರ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಅಲ್ಲಿಯ ರೈತರು ಮನವಿ ಕೊಟ್ಟಿದ್ದಾರೆ. ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಅಧಿಕಾರಿಗಳ ಬಗ್ಗೆ ಕ್ರಮಕ್ಕೆಗೊಳ್ಳುತ್ತೀರೋ ಹೇಗೆ ಎಂಬುದನ್ನು ತಿಳಿಸಬೇಕು. ಇನ್ನು ಎರಡನೆಯದಾಗಿ, ಭೂಸ್ವಾಯ ಮಂಡಳಿ ಆಜ್ಞೆ ಮಾಡಿರುವುದು ಕೇವಲ ಕೃಷಿಗಾಗಿ. ಕೃಷಿಯನ್ನು ಮಾಡಲಿಕ್ಕೆ ಮಾತ್ರ ಭೂಸ್ವಾಯ ಮಂಡಳಿಯವರು ಗೇಣಿದಾರರಿಗೆ ಕೊಟ್ಟರು. ಆದರೆ ಇತ್ತೀಚೆಗೆ ಅಲ್ಲಿ ಏನಾಗಿದೆ ಅಂದರೆ ಕೆಲವು ಗ್ರಾನೈಟ್ ಮಾಲೀಕರು ಬಂದು ಗೇಣಿದಾರರಿಗೆ 20-25 ಸಾವಿರ ಕೊಟ್ಟು ಜಮೀನನ್ನು ಖರೀದಿ ಮಾಡಿ ಇಟ್ಟುಕೊಂಡಿದ್ದಾರೆ. ನಮ್ಮ ಕಡೆಯಲ್ಲಿ ಹಿಂದೆ ಒಂದು ಏಕರೆಗೆ 5 ಸಾವಿರ ರೂಗಳು ಮಾತ್ರ ಇತ್ತು. ಭೂಸ್ವಾಯ ಮಂಡಳಿ ಕೊಟ್ಟಂತಹ ಜಮೀನು ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದಾಗ್ಯೂ ಕೂಡ ಅಲ್ಲಿ ತಹಶೀಲ್ದಾರರವರು ಈಗ ಮುಟ್ಟುಗೋಲು ಹಾಕಿಕೊಂಡಿದ್ದಾರೆಂದು ಹೇಳಿದ್ದಾರೆ. ಸರ್ವೆ ನಂಬರ್ 1,2,9,59,61,80,81 ಮತ್ತು 84 ಈ ಸರ್ವೆ ನಂಬರ್‌ಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆಯೆಂದು ಹೇಳಿದ್ದಾರೆ. ಕೇವಲ ಪಹಣಿ ಪತ್ರಿಕೆಯಲ್ಲಿ ಮಾತ್ರ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅಲ್ಲಿ ನಿರಂತರವಾಗಿ ಕೆಲವರು ಅನಧಿಕೃತವಾಗಿ ಗ್ರಾನೈಟ್ ಕಲ್ಲನ್ನು ತೆಗೆಯುತ್ತಿದ್ದಾರೆ. ಮದ್ರಾಸ್ ಕಂಪನಿಯವರು ಅಲ್ಲಿ ಬಂದು ಕಲ್ಲು ತೆಗೆಯುತ್ತಿದ್ದಾರೆ. ಸರ್ಕಾರ ಪಶಕ್ಕೆ ತೆಗೆದುಕೊಂಡಿದ್ದರೆ ಕೂಡಲೇ ಯಾರು ಜಮೀನುರಹಿತ ಬಡವರು ಇದ್ದಾರೆ ಕೃಷಿ ಭೂಮಿ ಇಲ್ಲದೇ ಇರುವವರು ಕೃಷಿ ಮಾಡುವಂತಹ ಜನರಿಗೆ ಅದನ್ನು ರೀಗ್ರಾಂಟ್ ಮಾಡಿಕೊಡುತ್ತೀರಾ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:- ಭೂಸುಧಾರಣಾ ಕಾನೂನಿನ ಅನ್ವಯ 15 ವರ್ಷ ಯಾರಿಗೂ ಪರಭಾರೆ ಮಾಡಬಾರದೆಂದು ಕಂಡೀಷನ್ ಹಾಕಿದೆ. ಆ ಭೂಮಿಯಲ್ಲಿ ವ್ಯವಸಾಯ ಮಾಡಬೇಕು. ಆ ಭೂಮಿಯನ್ನು ಪರಭಾರೆ ಮಾಡಕೂಡದು ಎಂದು ಇದೆ. ಅಲ್ಲಿ ವ್ಯವಸಾಯ ಮಾಡುತ್ತಿಲ್ಲ. ಅಲ್ಲಿ ಗ್ರಾನೈಟ್ ಮತ್ತು ಕ್ರಷರ್ ಸ್ಟೋನ್ ಇರುವುದರಿಂದ ಯಾರಿಗೋ ಅದನ್ನು ಕೊಟ್ಟುಕೊಂಡು ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. 15 ಕೇಸುಗಳಲ್ಲಿ, ಆ ಭೂಮಿಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಯಾರಾದರೂ ಅಂತಹ ಕೆಲಸ ಮಾಡಿದರೆ ಅದನ್ನೂ ಸಹ ವಾಪಸು ತೆಗೆದುಕೊಳ್ಳುತ್ತೇವೆ. ಭೂಮಿಯನ್ನು ವಾಪಸ್ಸು ತೆಗೆದುಕೊಂಡ ಮೇಲೆ ಜಮೀನನ್ನು ಯಾವ ರೀತಿ ವಿಲೇವಾರಿ ಮಾಡಬೇಕೆಂದರೆ ಲ್ಯಾಂಡ್ ರೆವಿನ್ಯೂ ಆಕ್ಟ್ ಇದೆ ಆ ಪ್ರಕಾರ ವಿಲೇವಾರಿ ಮಾಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ:- ತಾವು ವಾಪಸ್ಸು ತೆಗೆದುಕೊಂಡಿದ್ದೀರಿ. ಆದರೆ ಅಲ್ಲಿ ಅನಧಿಕೃತವಾಗಿ ಕೆಲಸ ಮಾಡುತ್ತಿದ್ದಾರೆ ನಾನು ಕಲಹ ಏನು ಕೊಡುತ್ತಿದ್ದೇನೆಂದರೆ, ಯಾರು ಜಮೀನು ರಹಿತ ಬಡ ಜನರು ಇದ್ದಾರೆ ಅವರು ಈಗಾಗಲೇ ಅರ್ಜಿ ಹಾಕಿಕೊಂಡಿದ್ದಾರೆ. ಆ ಬಡ ಜನರಿಗೆ ಯೋಗ್ಯ ಕೃಷಿ ಮಾಡುವಂತಹ ಜನರಿಗೆ ರೀಗ್ರಾಂಟ್ ಮಾಡಿಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ರಾಜಶೇಖರಮೂರ್ತಿ:- ನಾನು ಅದೇ ವಿಚಾರ ಹೇಳಿದ್ದೆನು. ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಜಮೀನು ಇಲ್ಲದವರಿಗೆ ಗ್ರಾಂಟ್ ಮಾಡಿಕೊಡುತ್ತೇವೆ.